ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯಲ್ಲಿ ದಿನಗೂಲಿ ಮೇಲೆ ಕೆಲಸ ಮಾಡುತ್ತಿರುವ ನೌಕರರು.

2869:(3864)

ಶ್ರೀ ಎನ್.ವೈ.ಗೋಪಾಲಕೃಷ್ಣ (ಮೊಳಕಾಲ್ಮೂರು): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯಲ್ಲಿ ದಿನಗೂಲಿ ಮೇಲೆ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರು ಎಷ್ಟು?

ಆ) ಅವರಿಗೆ ನೀಡುತ್ತಿರುವ ದಿನಗೂಲಿ ಎಷ್ಟು?

ಇ) ಈ ದಿನಗೂಲಿ ನೌಕರರಿಗೆ ದಿನಗೂಲಿಯನ್ನು ಸರಿಯಾಗಿ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಈ ದಿನಗೂಲಿ ನೌಕರರನ್ನು ಖಾಯಂಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ಚಿತ್ರದುರ್ಗ ಪ್ರಾದೇಶಿಕ ಹಾಗೂ ಸಾಮಾಜಿಕ ಅರಣ್ಯ ವಿಭಾಗದ ಮೊಳಕಾಲ್ಮೂರು ತಾಲ್ಲೂಕಿನಲ್ಲಿ 35 ಜನ ದಿನಗೂಲಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಆ) ಮಂಜೂರಾಗಿರುವ ಶೆಡ್ಯೂಲ್ ದರದಂತೆ ನಿಸ್ತಂತು ಕೆಲಸ ನಿರ್ವಹಿಸುತ್ತಿರುವ ದಿನಗೂಲಿಯವರಿಗೆ ಒಂದು ದಿನಕ್ಕೆ ರೂ. 57.70 ಹಾಗೂ ಪ್ಲಾನ್‌ಟೇಷನ್ ಪಾಚರ್‌ಗೆ ಒಂದು ದಿನಕ್ಕೆ ರೂ. 54.45 ದರದಲ್ಲಿ ಪಾವತಿಸಲಾಗುತ್ತಿದೆ.

ಇ) ದಿನಗೂಲಿಯನ್ನು ಪ್ರತಿ ತಿಂಗಳು ಸಕಾಲದಲ್ಲಿ ನೀಡಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ಹಲವು ಯೋಜನೆಗಳಲ್ಲಿ ಈ ವಿಭಾಗಕ್ಕೆ ಅನುದಾನ ಮತ್ತು ಬೇಡಿಕೆಯಾನುದಾನ ನೀಡುವಲ್ಲಿ ವಿಳಂಬವಾದಾಗ ಮಾತ್ರ ಆ ದಿನಗೂಲಿ ನೌಕರರಿಗೆ ದಿನಗೂಲಿ ಪಾವತಿಸುವುದು ವಿಳಂಬವಾಗುತ್ತದೆ.

ಈ) ಈ ದಿನಗೂಲಿ ನೌಕರರಿಗೆ ಸಕಾಲದಲ್ಲಿ ದಿನಗೂಲಿಯನ್ನು ಪಾವತಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಉ) ದಿನಾಂಕ 1-7-84ರಂದು ಮತ್ತು ಆದರ ಹಿಂದೆ ನೇಮಕಗೊಂಡ ದಿನಗೂಲಿ ನೌಕರರನ್ನು ಮಾತ್ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 2 ಎಸ್‌ಎಲ್‌ಸಿ 90 ದಿನಾಂಕ 6-8-90ರ ಪ್ರಕಾರ ಸಕ್ರಮಗೊಳಿಸಲು ಅವಕಾಶವಿದ್ದು, ಅದರಂತೆ ಅರ್ಹ ದಿನಗೂಲಿ ನೌಕರರನ್ನು ಸಕ್ರಮಗೊಳಿಸಲಾಗಿದೆ. ದಿನಾಂಕ 1-7-84ರ ನಂತರ ನೇಮಕಗೊಂಡ ದಿನಗೂಲಿ ನೌಕರರನ್ನು ಸಕ್ರಮಗೊಳಿಸಲು ಅವಕಾಶವಿಲ್ಲ. ಅವರನ್ನು ದಿನಗೂಲಿ ನೌಕರರನ್ನಾಗಿಯೇ ಮುಂದುವರಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕಾ ವ್ಯಾಪ್ತಿಯಲ್ಲಿ ಬರುವ ಶೇಂಗಾ ಸುಲಿಯುವ ಘಟಕಗಳು

2870:(3923)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ಮತ್ತು ಹಿರಿಯೂರು ತಾಲ್ಲೂಕಿನ ಸಣ್ಣ ಕೈಗಾರಿಕಾ ವ್ಯಾಪ್ತಿಯಲ್ಲಿ ಎಷ್ಟು ಎಣ್ಣೆ ಮತ್ತು ಶೇಂಗಾ ಸುಲಿಯುವ ಘಟಕಗಳಿಗೆ ಸಾಲ ಮಂಜೂರು ಮಾಡಿದೆಯೇ?

ಶ್ರೀ ಬಿ.ಎ.ಮೊಯ್ದೀನ್ (ಸಣ್ಣ ಕೈಗಾರಿಕಾ ಸಚಿವರು):

ಅ) ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಹಿರಿಯೂರು ತಾಲ್ಲೂಕಿನ ಸಣ್ಣ ಕೈಗಾರಿಕಾಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಈ ಕೆಳಕಂಡಂತೆ ಸಾಲ ಮಂಜೂರು ಮಾಡಲಾಗಿದೆ;

ಕ್ರ.ಸಂ.	ತಾಲ್ಲೂಕಿನ ಹೆಸರು	ಶೇಂಗಾ ಸುಲಿಯುವ ಘಟಕಗಳ ಸಂಖ್ಯೆ	ಎಣ್ಣೆ ತಯಾರಿಸುವ ಘಟಕಗಳ ಸಂಖ್ಯೆ
1.	ಚಳ್ಳಕೆರೆ	42	62
2.	ಹಿರಿಯೂರು	15	10
	ಒಟ್ಟು	57	72